RegdNo B G 155 (128) 12—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆಘಂಸ್ಥೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ'ಎಸ್ ಕೃಷ್ಣರಾವ್ 2

ವಾರ್ತಾ ವಿಶೇಷಗಳು

ಬೆಂಗಳೂರು— ನಾಲ್ಕನೇ ಯೋಜನೆಯಲ್ಲಿ 125 ವಿಲಿಯನ್ ಟನ್ ಆಹಾರ ಉತ್ಪಾದನೆಗೆ ಅವಶ್ಯಕಗಳನ್ನೆಲ್ಲಾ ಒದಗಿಸಿಕೊಳ್ಳಲು ದೇಶಕ್ಕೆ ಸಾಮರ್ಥ್ಯವಿದೆಯೆಂದು ಕೇಂದ್ರ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಹೇಳಿದರು

★

ವಾಷಿಂಗ್ಟನ್— ವಿಯಟ್ನಾಂನಲ್ಲಿ ಅಮೇರಿಕಾ ಯುದ್ಧದ ಚಟುವಟಿಕೆ ಹೆಚ್ಚಿಸಿಕೊಳ್ಳಲಿದೆಯೆಂದೂ, ಅಮೇರಿಕಾ ಸೈನ್ಯ 11 ಲಕ್ಷಕ್ಕೂ ಏರಬಹುದೆಂದೂ ವಂದಿಯಾಗಿದೆ.

ಮದರಾಸು— ರಷ್ಯಾಗೆ ಉಕ್ಕು ಮತ್ತು ಕೈಮಗ್ಗ ಬಟ್ಟೆ ರಫ್ತು ಮಾಡಲು ಮುಖ್ಯಮಂತ್ರಿ ಭಕ್ತವತ್ಸಲಂ ಕರೆ ಇತ್ತಿರುವರು.

ಜೋಹನ್ಸಬರ್ಗ್— 29 ವರ್ಷದ ಆರ್ಥರ್ ಜಫ್ತಾ ಎಂಬ ನೀಗ್ರೋ ತನ್ನ ದೇಹಕ್ಕೆ ಸೀಮೆಎಣ್ಣೆ ಹೊಯ್ದುಕೊಂಡು ಸುಟ್ಟುಕೊಂಡು ಪ್ರಾಣಾರ್ಪಣ ಮಾಡಿದನು.

ಮದರಾಸು— ಕಳ್ಳತನ ಮಾಡಿದ ಮೂರು ಮಂದ ಪೋಲೀಸರು ದಸ್ತಗಿರಿ ಮಾಡಲ್ಪಟ್ಟರು

★

ತಿರುಚಿ — ತಿರುಚಿ ಮತ್ತು ಶ್ರೀರಂಗ ಮುನಿಸಿಪಾಲಿಟಿಯವರು ಮೊನ್ನೆ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪೌರ ಸನ್ಮಾನ ನೀಡಿದರು.

★

ವಾಲೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಷಂಡಶ್ಯ ಕೃಷ್ಣಜೋಯಿಸರವರಿಂದ

13 ಮಂಗಳವಾರ ಪೂರ್ಣಿಮೆ ಪೂರ್ವಾಷಾಢ

ಅಜಾದ ಕಾಶ್ಮೀರ

ಶ್ರೀನಗರ— ಪಾಕಿಸ್ತಾನ ಅಕ್ರಮಿತ ಕಾಶ್ಮೀರದಲ್ಲಿ ಆಹಾರಾಭಾವ ಪ್ರದರ್ಶಗಳೂ ನಿಹಾರ ಅಂಗೆಗಳೂ ನಡೆಯುತ್ತಿರುವುದಾಗಿ ವದಿಯಾಗಿದೆ.

★

ನೆಹರು ನಿಧಿಗೆ ತೆಂಗಿನಕಾಯಿ

ಅಲಪ್ಪಿ— ಅಲಪ್ಪಿ ಜಿಲ್ಲೆಯ ತೆಂಗು ಬೆಳೆಯು ಗ್ರಾಮಗಳ ಪಂಚಾಯಿತಿಗಳು ನೆಹರು ನಿಧಿಗೆ ತೆಂಗಿನಕಾಯಿ ಶೇಖರಿಸುತ್ತಿವೆ.

ಕಾಗೇಬಂಗಾರ

ಎಟ್ಟಯಾಪುರ — ಪೆರಿಯಸಾಮಿ ಗ್ರಾಮದಲ್ಲಿ ಕಾಗೇಬಂಗಾರದ ಗಣಿ ಸಿಕ್ಕಿದೆ

★

ನಾಗಾ ಹಾವಳಿ

ಪಿಲಾಗು— ಮಣಿಪುರದಲ್ಲಿ ನಾಗಾಗಳು ಕಣ್ಣಾ ಮುಚ್ಚಾಲೆಯಂತೆ ಹಾವಳಿ ಮಾಡುತ್ತಾ ತಲೆತಪ್ಪಿಸಿಕೊಳ್ಳುತ್ತಿದಾರೆ

ಏಷ್ಯಾ ಬ್ಯಾಂಕು

ಮನಿಲಾ (ಫಿಲಿಪ್ಪೈನ್ಸ್)— ಏಷ್ಯಾ ಅಭಿವೃದ್ಧಿ ಬ್ಯಾಂಕು 1966 ರಲ್ಲಿ ನಗುವ ನೀರೀಕ್ಷೆ ಇದೆ : ಬಂಡವಾಳದಲ್ಲಿ ಶೇಕಡ 20 ಜಪಾನು ಹಾಕಲಿದೆ : ಅಮೇರಿಕ ಶೇಕಡ 20— 200 ವಿಲಿಯು ಡಾಲರುಗಳವರೆಗೆ ಹಾಕುವುದಾಗಿ ಅಗಲೇ ತಿಳಿಸಿದೆ.

ಹಿಂದೂ ಪೂಜಾರಿಯ ಬಂಧನ

ಜಾರ್ಜಟೌನ್— ಹಿಂಸಾಕಾರ್ಯಗಳಿಗೆ ಪ್ರೇರೇಪಣೆ ಮತ್ತು ಉತ್ತೇಜನ ಕೊಡುತ್ತಿದಾನೆಂಬ ಆಪಾದನೆಗಾಗಿ 37 ವರ್ಷದ ಹಿಂದೂ ಪೂಜಾರಿ ಪಂಡಿತ ರಾಮಲಖಲಾನ್ನು ಬಂಧಿಸಲು ಗೌಯ್ನರು ಆಜ್ಞೆ ಮಾಡಿದ್ದಾರೆ.

ಹೊಸ ತೆರಿಗೆಗಳು

ನವದೆಹಲಿ— ನಾಲ್ಕನೇ ಯೋಜನೆಗೆ ಬೇಕಾಗುವ 21500 ಕೋಟಿಗಳನ್ನು ಒದಗಿಸಿಕೊಳ್ಳಲು ಹೆಚ್ಚಿಗೆ 3000 ಕೋಟಿ ರೂಗಳನ್ನು ಕೇಂದ್ರ ಮತ್ತು ರಾಜ್ಯಗಳು ಹೊಸ ತೆರಿಗೆ ಮೂಲಕ ಎತ್ತಬೇಕಾಗಿದೆ

ನೆರೆಹಾವಳಿ

ಪಾಟ್ನಾ— ಕಾಮ್ ಬರ್ಡ್ ಮತ್ತು ಕೋಸಿಯಲ್ಲಿ ವಿಪರೀತ ಪ್ರವಾಹ ಬಂದಿದ್ದು ಮಿಲಿಟರಿ ಸಹಾಯ ಕೋರಲಾಗಿದೆ — ನದಿ ದಡದಲ್ಲಿ ಅನೇಕ ಕಡೆ ಒಡ್ಡ ಕಂಟಾಗಿದೆ.

★

ಗ್ರಾಮಗಳ ಮುಳುಗಡೆ

ಪಿಲಾಂಗು— ಬ್ರಹ್ಮಪುತ್ರ ನದಿಯು ಪ್ರವಾಹದಿಂದ ಸುತ್ತಮುತ್ತಲ 35 ಗ್ರಾಮಗಳು ನೀರಿನಲ್ಲಿ ಮುಳುಗಿವೆ : ಜನರನ್ನು ಹೊಗೆ ಸಾಗಿಸಲಾಗಿದೆ — ಇನ್ನು 35 ಗ್ರಾಮಗಳು ಅಪಾಯಸ್ಥಿತಿಯಲ್ಲಿವೆ — 10 ಲಕ್ಷ ರೂಗಳ ಬೆಳೆ ನಷ್ಟವಾಗಿದೆ

ಗರ್ಭಪಾತಕ್ಕೆ ಮಹಿಳಾ ನಾಯಕರ ತಿರಸ್ಕರಣೆ

★

ಜಾಬಲಪುರ— ಅಖಿಲ ಭಾರತ ಮಹಿಳಾ ಸಮ್ಮೇಳನದ ಸ್ಥಾಯಿ ಸಮಿತಿ ನಿನ್ನೇ ನಡೆಸಿದ ಎಸಾಟಿಂಗನಲ್ಲಿ ದೇಶದಲ್ಲಿ ಶಾಸನ ಸಮ್ಮತ ಗರ್ಭಪಾತದ ಕಲ್ಪನೆಯನ್ನು ಬಹುಮತದಿಂದ ತಿರಸ್ಕರಿಸಿತು — ಹೆಡಗಿಯುರು ವಿದ್ಯಾ ಸಂಸ್ಥೆಗೆ ಬಂಗಿಯಾದ ಬಟ್ಟೆಯುಟ್ಟಿ ಹೋಗುವುದರ ಬಗ್ಗೆ ಅಸಮ್ಮತಿ ಸೂಚಿಸಿತು — ಮಹಿಳೆಯರು ಉಡುವು ಭಾರತ ಸಂಸ್ಕೃತಿ ಮತ್ತು ಆದರ್ಶ ಸ್ತ್ರೀತ್ವಕ್ಕೆ ಅನುಗುಣವಾಗಿರಬೇಕೆಂದು ಹೇಳಲಾಯಿತು.

★

ಗಾಕಿಸ್ತಾನದಲ್ಲಿ

ಡಾಕಾ— ಪೂರ್ವ ಪಾಕಿಸ್ತಾನದಲ್ಲಿ ನೆರೆಹಾವಳಿ ಭೀಕರವಾಗಿದ್ದು ಬಟಗಾಂಗು, ಬಾರಿಸಾಲು, ನಾಕಾಲಿ, ಪಾಬ್ನಾದ ಅನೇಕ ಭಾಗಗಳು ಮುಳುಗಡೆಯಾಗಿದೆ. ಪ್ರವಾಹ ಅನಾಹುತದಿಂದ 4 ಲಕ್ಷ ಜನ ತೊಂದರೆಗೀಡಾಗಿದ್ದಾರೆ.

★

ರಕ್ಷಣಾ ಖರ್ಚಿನಲ್ಲಿ ಕೋತಾ ಇಲ್ಲ

ಮಾಸ್ಕೊ— ಪದ್ಮದ ಪರಿಸ್ಥಿತಿಯಲ್ಲಿ ಯಾವ ಶಸ್ತ್ರ ರಕ್ಷಣಾ ಖರ್ಚಿನಲ್ಲಿ ಕೋತಾ ಮಾಡಲು ಸಾಧ್ಯವಿಲ್ಲವೆಂದು ಪ್ರಧಾನಿ ಕೋಸಿಗಿನ್ ಹೇಳಿದರು.

★

ಹೆಂಡತಿ ಕೊಟ್ಟು, ಕತ್ತೇ ಪಡೆದ !

ಆ ಕತ್ತೆ

ಯುಗಸ್ಲಾವಿಯದ ಒಂದು ಗ್ರಾಮದಲ್ಲಿ 1937 ರಲ್ಲಿ ನಡೆದ ಸ್ವಾರಸ್ಯ ವಿಷಯವಿದು ; ಇಂದು ಇಂತಹ ಕಾರ್ಯವನ್ನು ಯಾರು ತಾನೇ ಯೋಚಿಸಾರು !

ಪ್ರಥಮ ಮಹಾಯುದ್ಧದಲ್ಲಿ ಪ್ರಜಕೊಂ ಸ್ರಡನೇವಿಚ್ ಎಂಬ ಯುವಕ ಸೈನ್ಯದಲ್ಲಿ ಕಾದಾಡುತ್ತಿದ್ದ ಸಿಪಾಯಿ ; ಆ ಹುಡುಗಿಯ ದೇಶದಭಕ್ತಿಯನ್ನು ಮೆಚ್ಚಿ ಒಂದು ಕತ್ತೆ— ಅದು ಅವನ ಪದಾರ್ಥಗಳನ್ನೆಲ್ಲಾ ಹೊರುತ್ತಿತ್ತು ; ಅದರ ಮೇಲೆ ಅವನಿಗೆ ಅತಿ ಪ್ರೇಮ ಹುಟ್ಟಿತ್ತು ;

ಒಂದು ದಿನ ಅವನು ತೀರ ಗಾಯಗೊಂಡಾಗ ಅದು ಬೆನ್ನು ಮೇಲೆ ಬಂದು ಅದರ ಕಿವಿಯಲ್ಲಿ ಏನೋ ಹೇಳಿದನು - ಅದು ಹತ್ತಿರವಿದ್ದ ನಿಲ್ತಾಣ ಅಧಿಕಾರಿಯ ಹತ್ತಿರಕ್ಕೆ ಕರೆದುಕೊಂಡುಹೋಯಿತು ; ಅವನು ಅಲ್ಲಿ ಕೆಲ ದಿನಗಳಿದ್ದು ಗುಣಹೊಂದಿದನು ; ನಂತರ ತನ್ನ ಕತ್ತೆಗಾಗಿ ಹುಡುಕಾಡಿದನು ; ಆದರೆ ಅದು ಸಿಕ್ಕಲಿಲ್ಲ.

ಹೀಗಿರಲು ಕೆಲ ವರ್ಷಗಳನಂತರ ಅವನು ಒಂದು ಸ್ಥಳೀಯ ಮೂರುಕಟ್ಟೆಗೆ ತನ್ನ ಸುಂದರ ಪತ್ನಿಯೊಡನೆ ಹೋದಾಗ ಅಲ್ಲಿ ತನ್ನ ಕತ್ತೆ, ತನ್ನ ಬೆಸರಿನ ಮೊದಲಕ್ಷರಗಳಾದ ಎ. ಎಸ್ ಎಂಬ ಅಕ್ಷರಗಳಿದ್ದ ಕತ್ತೆ, ಇದ್ದುದನ್ನು ಕಂಡನು : ಅದನ್ನು ಪಡೆಯಲು ಇಚ್ಛಿಸಿದನು ; ಮೂರುವರೆನು ಅದಕ್ಕೆ ನಾಲ್ಕು ಪೌಂಡುಗಳನ್ನು ಕೇಳಿದನು : ಅಷ್ಟು ಕೊಡಲು ಇವನಿಗೆ ನನುಕೂಲವಿಂಲಿಲ್ಲ ; ಬೆಲೆ ಇಳಿಸಲು ಪ್ರಯತ್ನಿಸಿದನು ; ಆದರೆ ಮೂರುವರೆನು ಒಪ್ಪಲಿಲ್ಲ.

ಅವನಿಗೆ ಒಂದು ಯೋಚನೆ ಹೊಳೆಯಿತು : ಮೂರುವರೆನ ಕಣ್ಣು ತನ್ನ ಹೆಂಡತಿಯವೇಲೆ ಬಿದ್ದಿದ್ದುದನ್ನೂ, ತನ್ನ ಹೆಂಡತಿಯು ದೃಷ್ಟಿ ಮೂರುವರೆನ ಮೇಲಿ ಬಿದ್ದಿದುದನ್ನೂ ಕಂಡನು : ಆಗ ಮೂರುವರೆನಿಗೆ, ತನ್ನ ಹೆಂಡತಿಯನ್ನು ತೆಗೆದುಕೊಂಡು, ಅದರ ಬದಲಾಗಿ ತನಗೆ ಕತ್ತೆಯನ್ನು ಗೂಡುವಂತೆ ತಿಳಿಸಿದನು ; ಹೆಂಡತಿಯೂ ಅವನಲ್ಲಿಗೆ ಹೋಗಲು ಸಮ್ಮತಿಸಿದಳು ; ಅದೇ ರೀತಿ ವ್ಯವಸ್ಥೆ ಮಾಡಿಕೊಂಡರು. ಆಗ ಇಂತಿಹ ವಿಷಯಗಳ ತಕ್ಸೀಮಗಳಲ್ಲಿ ಯಾರೂ ತಲೆ ಹಾಕಿಯೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ.

‡ ಹೀಗಿದೆ, ಈ ವ್ಯವಹಾರ ; ಸ್ವಹನೋವಿಚ್ ತನ್ನ ಕತ್ತೆಯನ್ನು, ತನ್ನನ್ನು ಬಿಟ್ಟಿಸಿದ ಕತ್ತೆಯನ್ನು ತುಂಬಾ ಪ್ರೀತಿಸುತ್ತಿದ್ದ ಕತ್ತೆಯನ್ನು, ಪಡೆಯಲು ತನ್ನ ಹೆಂಡತಿಯ ಸ್ವೇ ಕೊಡಲು ನಿರ್ಧರಿಸಿದ : ಇದು ಅಸ್ವಾಭಾವಿಕವಾಗಿದೆ ; ಈ ಹೆಂಡತಿಯನ್ನು ಕಂಡ ಕತ್ತೇ ಮೂರುವರೆನು, ಇವಳು ಯುವತಿಯೂ ಸುಂದರಿಯು ಆಗಿರುವುದನ್ನು ನೋಡಿ, ಅವಳನ್ನು ಹೊಂದಲು ಸಮ್ಮತಿಸಿದನು ; ಮತ್ತು ಆ ಮನುಷ್ಯನನ್ನು ನೋಡಿದ ಈ ಹೆಂಡತಿಯೂ ಅವನಲ್ಲಿಗೆ ಹೋಗಲು ಸಮ್ಮತಿಸಿದಳು : ಇನೆಲ್ಲಾ ವಿಚಿತ್ರವಾಗಿದೆ ; ಈ ಅದಲುಬದಲಿಗೆ ನ್ಯಾಯವಿದ್ಧಾಯಕವೇನೂ ಜೇಕಾಲ್ಲವಿದ್ದುದು ಮತ್ತೂ ಸ್ವಾಸ್ಥ್ಯಕರವಾಗಿದೆ ; ಯಾವ ನೈತಿಕ ಕಟ್ಟಲೆ, ಯಾವ ಮತೀಯ ಅಳತೆ ಇದಕ್ಕೆ ಅತಂಕವಿಲ್ಲ ! ಎಂತಹ ವಿಚಿತ್ರ ನಾಗರೀಕ ಪ್ರಪಂಚ ! —Truth

★

ಭಾರತೀಯ ಶಿಲ್ಪಕಲಾ ಪ್ರದರ್ಶನ

ಹ್ಯಾಂಬರ್ಗ್ (ಜರ್ಮನಿ)— ಮೊದಲ್ಲಿ ಅತಿ ಕೌಶಲ್ಯದಿಂದ ಕೆತ್ತಿದ ಭಾರತದ ಅನೇಕ ಸುಂದರ ವಸ್ತುಗಳನ್ನು ಈಚೆಗೆ ಹ್ಯಾಂಬರ್ಗಿನಲ್ಲಿ ಪ್ರದರ್ಶಿಸಲಾಯಿತು : ಈ ಪ್ರದರ್ಶನವು ಅತಿ ಜನಪ್ರಿಯವಾಗಿ ನಡೆಯಿತು : ಜರ್ಮನಿಯ ಹೇರಳವಾಗಿ ಒಂದು ವ್ಯವಸ್ಥಾಪಕನ್ನು ಅಭಿನಂದಿಸಿದರು. (ಯೂ ಪಿ ಎಸ್)

ಗೋರಕ್ಷಣೆ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲ್ಯಾಂಡ್ಸ್ ದಿಗ್ವಿಜಯ 8 ನೇ ವಾರ

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ

ಜಾನ್‌ವರ್ JANWAR

ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,
ಹಾಲಿವುಡ್‌ನಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಆಪೆರಾ ಜನಪ್ರಿಯ 3 ನೇ ವಾರ

ವಾಡರ್ಸ್ ಥಿಯೇಟರ್ಸ್‌ನಲ್ಲಿ 100 ನೇ ಅಭೂತಪೂರ್ವ ತಮಿಳು ಚಿತ್ರ

ವಲ್ಲವನುಕು ವಲ್ಲವಳ್

ನಟವರ್ಗ— ಜಮುನಾ, ಗಣೇಶ್, ಸಾವಿತ್ರಿ, ಅಶೋಕ್, ತಂಗವೇಲು
ಮುತ್ತುಲಕ್ಷ್ಮಿ, ಮನೋರಮ

ಸುಧಾ

ಉತ್ತಮ ಟಾನಿಕ್

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಶುಭಾಶೀರ್ವಾದ ಅನುಗ್ರಹ ಕೃಪೆಯಿಂದಾಗಿದೆ

Help The GORAKSHANA

.... ಗೋರಕ್ಷಣೆಗೆ ಬೆಂಬಲ ನೀಡಿ ....

ಕರ್ನಾಟಕದಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದ 50 ನೈಪೈ
ಸಹಾಯಕರು ರೂ 10 ಮತ್ತು ಪೆಂಬಲಿಗರು ರೂ 25(ಒಂದು ಸಾರಿವಶಾತ್) :
ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ ಮೈಸೂರು 4

Edited, Printed & Published by Dharma prachara nirathe M S Krisbna Rao) Proprietor) at the Satyavadi Press Chamarajapuram, Mysore 4